# ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು

ಕರಾಕಾಸೇಪ್ರಾ: 09/ಎಡಿಎಂ/2026

ಸದಸ್ಯ ಕಾರ್ಯದರ್ಶಿಯವರ ಕಛೇರಿ,
ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ,
"ನ್ಯಾಯ ದೇಗುಲ", ಹೆಚ್. ಸಿದ್ದಯ್ಯ ರಸ್ತೆ,
ಬೆಂಗಳೂರು, ದಿನಾಂಕ: 29.07.2026

## ಭಾರಿ ವಾಹನಾ ಚಾಲನಾ ಪರೀಕ್ಷೆಗೆ ಹಾಜರಾಗಲು ತಿಳುವಳಿಕೆ ಪತ್ರ

**ವಿಷಯ:** ವಾಹನ ಚಾಲಕರ ಹುದ್ದೆಗೆ ಅರ್ಜಿ ಸಲ್ಲಿಸಿರುವ ಅರ್ಹ ಅಭ್ಯರ್ಥಿಗಳಿಗೆ ಭಾರಿ ವಾಹನಾ ಚಾಲನಾ ಪರೀಕ್ಷೆಗೆ ಹಾಜರಾಗುವ ಬಗ್ಗೆ.

**ಉಲ್ಲೇಖ:** 1) ಈ ಕಛೇರಿಯ ನೇಮಕಾತಿ ಅಧಿಸೂಚನೆ ಸಂಖ್ಯೆ:09/ಎಡಿಎಂ/2026, ದಿ:27.05.2026.
2) ಪೊಲೀಸ್ ಅಧೀಕ್ಷಕರು, ಪೊಲೀಸ್ ವಾಹನ ಚಾಲನಾ ಮತ್ತು ಸಂರಕ್ಷಣಾ ಶಾಲೆ, ಪೊಲೀಸ್ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ:ಪಿಡಿಎಂಎಸ್/20/ತರಬೇತಿ/2026, ದಿನಾಂಕ:27.07.2026.

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದಿಂದ, ಎರಡು (02) ವಾಹನ ಚಾಲಕರ ಹುದ್ದೆಗಳ ನೇರ ನೇಮಕಾತಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಅದರಂತೆ, ಕಛೇರಿಗೆ ಸ್ವೀಕೃತಗೊಂಡ ಅರ್ಜಿಗಳನ್ನು ನಿಯಮಾನುಸಾರ ಪರಿಶೀಲಿಸಿ, ಅರ್ಹ 572 ಅಭ್ಯರ್ಥಿಗಳನ್ನು ಭಾರಿ ವಾಹನ ಚಾಲನಾ ಪರೀಕ್ಷೆಗಾಗಿ ಪರಿಗಣಿಸಿ, ಪಟ್ಟಿಯನ್ನು ಸಿದ್ದಪಡಿಸಿ. ಪೊಲೀಸ್ ಅಧೀಕ್ಷಕರು, ಪೊಲೀಸ್ ವಾಹನ ಚಾಲನಾ ಮತ್ತು ಸಂರಕ್ಷಣಾ ಶಾಲೆ, ಪೊಲೀಸ್ ಇಲಾಖೆ, ಬೆಂಗಳೂರು ಇವರಿಗೆ ಭಾರಿ ವಾಹನಾ ಚಾಲನೆ ಪರೀಕ್ಷೆಗೆ ಒಳಪಡಿಸಲು ವೇಳಾಪಟ್ಟಿಯನ್ನು ಮತ್ತು ಇತರೆ ವಿವರಗಳನ್ನು ನೀಡುವಂತೆ ಕೋರಲಾಗಿತ್ತು.

ತತ್ಸಂಬಂಧದಲ್ಲಿ ಈ ಕಛೇರಿಗೆ ಸ್ವೀಕೃತವಾಗಿರುವ ಪೊಲೀಸ್ ಇಲಾಖೆಯ ಉಲ್ಲೇಖಿತ (02)ರ ಪತ್ರದಲ್ಲಿನ ಕೋರಿಕೆ ಮತ್ತು ಮಾಹಿತಿಯನ್ವಯ ಅರ್ಹ 572 ಅಭ್ಯರ್ಥಿಗಳು ಭಾರಿ ವಾಹನ ಚಾಲನಾ ಪರೀಕ್ಷೆಗೆ ಹಾಜರಾಗುವ ದಿನಾಂಕ ಮತ್ತು ಸಮಯದ ವೇಳಾ ಪಟ್ಟಿಯನ್ನು ಕಛೇರಿಯ ಅಧಿಕೃತ ವೆಬ್‌ಸೈಟ್ karnataka.nalsa.gov.in ನಲ್ಲಿ ಪ್ರಕಟಿಸಲಾಗಿದೆ. ಆಯಾ ದಿನಾಂಕಗಳಂದು ನಿಗಧಿಪಡಿಸಿದ ಸಮಯಕ್ಕೆ ಸರಿಯಾಗಿ ಅಧಿಸೂಚನೆಯಲ್ಲಿ ತಿಳಿಸಿರುವಂತೆ ತಮ್ಮ ಸ್ವಂತ ಖರ್ಚಿನಲ್ಲಿ ಭಾರಿ ವಾಹನಾ ಚಾಲನಾ ಪರೀಕ್ಷೆಗಾಗಿ ಪೊಲೀಸ್ ನೀರಿಕ್ಷಕರು, ಪಿಡಿಎಂಎಸ್, ಯಲಹಂಕ, ಬೆಂಗಳೂರು ರವರ ಬಳಿ ಹಾಜರಾಗಲು ಈ ಮೂಲಕ ತಿಳಿಸಿದೆ.

**ಚಾಲನಾ ಪರೀಕ್ಷೆಗೆ ಹಾಜರಾಗಬೇಕಾದ ವಿಳಾಸ:**

Society for Heavy Vehicle Driver Training Institute,
Singanayakanahalli (Near RTO Office)
Yelahanka, Bengaluru-560064

**Scan for location**

..2

**ಹಾಜರಾಗಬೇಕಾದ ದಿನಾಂಕ ಮತ್ತು ಸಮಯ:**

ಪ್ರಕಟಿಸಲಾದ ಪಟ್ಟಿಯಲ್ಲಿ ಅಭ್ಯರ್ಥಿಗಳ ಹೆಸರಿನ ಮುಂದೆ ನಮೂದಿಸಿರುವಂತೆ

**ಹಾಜರುಪಡಿಸಬೇಕಾದ ದಾಖಲಾತಿಗಳು:**

1) ಭಾರಿ ವಾಹನ ಚಾಲನಾ ಪರವಾನಗಿ (Original DL)
2) ಆಧಾರ ಕಾರ್ಡ್/ಚುನಾವಣಾ ಗುರುತಿನ ಚೀಟಿ
3) ಇತ್ತೀಚಿನ ವೈದ್ಯಕೀಯ ಪ್ರಮಾಣ ಪತ್ರ
4) ಇತ್ತೀಚಿನ 03 ಪಾಸ್‌ಪೋರ್ಟ್ ಸೈಜ್ ಫೋಟೋಗಳು

(ಈ ಮೇಲಿನ ಎಲ್ಲಾ ಮೂಲ ದಾಖಲಾತಿ ಪ್ರಮಾಣ ಪತ್ರಗಳು ಮತ್ತು ಸ್ವಯಂ ದೃಢೀಕೃತ ಜೆರಾಕ್ಸ್ ಪ್ರತಿಗಳು)

ಮುಂದುವರೆದು, ಅಭ್ಯರ್ಥಿಗಳಿಗೆ ಭಾರಿ ವಾಹನಾ ಚಾಲನಾ ಪರೀಕ್ಷೆಯ ವೇಳಾಪಟ್ಟಿ, ಸಮಯ, ಹಾಜರುಪಡಿಸಬೇಕಾದ ದಾಖಲಾತಿಗಳು ಮತ್ತು ಸ್ಥಳವನ್ನು ಪೊಲೀಸ್ ಅಧೀಕ್ಷಕರು, ಪೊಲೀಸ್ ವಾಹನ ಚಾಲನಾ ಮತ್ತು ಸಂರಕ್ಷಣಾ ಶಾಲೆ, ಪೊಲೀಸ್ ಇಲಾಖೆ, ಯಲಹಂಕ, ಬೆಂಗಳೂರು ಇವರು ನಿಗಧಿ ಪಡಿಸಿರುವುದರಿಂದ ಯಾವುದೇ ಸಂದರ್ಭದಲ್ಲಿ ಬದಲಾವಣೆಗೆ ಅವಕಾಶವಿರುವುದಿಲ್ಲ. ಒಂದು ವೇಳೆ ಸದರಿ ಪರೀಕ್ಷೆಗೆ ಅಭ್ಯರ್ಥಿಗಳು ಗೈರು ಹಾಜರಾದಲ್ಲಿ ಅಥವಾ ಅಗತ್ಯ ದಾಖಲೆಗಳನ್ನು ಹಾಜರುಪಡಿಸಲು ವಿಫಲವಾದಲ್ಲಿ ಅಂತಹ ಅಭ್ಯರ್ಥಿಗಳ ಉಮೇದುವಾರಿಕೆಯು ರದ್ದುಗೊಳ್ಳುತ್ತದೆ.

29/07/2016.

(ಹೆಚ್. ಶಶಿಧರ ಶೆಟ್ಟಿ)
ಜಿಲ್ಲಾ ನ್ಯಾಯಾಧೀಶರು ಹಾಗೂ
ಸದಸ್ಯ ಕಾರ್ಯದರ್ಶಿ

**ಇವರಿಗೆ:**

ಪ್ರಕಟಿಸಲಾದ ಅರ್ಹ ಪಟ್ಟಿಯಲ್ಲಿರುವ 572 ಅಭ್ಯರ್ಥಿಗಳಿಗೆ

**ಪ್ರತಿಯನ್ನು:**

ಪೋಲಿಸ್ ಅಧೀಕ್ಷಕರು, ಪೋಲಿಸ್ ವಾಹನ ಚಾಲನೆ ಮತ್ತು ನಿರ್ವಹಣಾ ಶಾಲೆ, ಬಿ.ಎಸ್.ಎಫ್. ಕಾಂಪೌಂಡ್, ಏರ್‌ಪೋರ್ಟ್ ರೋಡ್, ಯಲಹಂಕ, ಬೆಂಗಳೂರು-560063